ಕರ್ನಾಟಕ ಸರಕಾರ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಎ.ಡಿ.ಬಿ. ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಮೇಲ್ಮಟ್ಟ ಜಲಸಂಗ್ರಹ ನಿರ್ಮಾಣ ಕಾಮಗಾರಿಗಾಗಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಮರೋಳಿ ಗ್ರಾಮದ ಸ.ನಂ.19/1ಎ1ಪಿ1ಪಿ1ರಲ್ಲಿ 00-14-00 ಸೆಂಟ್ಸ್ ಜಮೀನನ್ನು ಭೂಸ್ವಾಧೀನಪಡಿಸುವ ಸಂಬಂಧ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ-19(1)(2)ರಡಿ ಅಂತಿಮ ಅಧಿಸೂಚನೆ ಹೊರಡಿಸುವ ಬಗ್ಗೆ.

**ಓದಲಾಗಿದೆ:-**

1. ಪ್ರಾಥಮಿಕ ಅಧಿಸೂಚನೆ ಕ್ರಮಾಂಕ:ಎಲ್ಎಕ್ಯೂ.ಸಿ.ಆರ್/101/2017/12642/ಬಿ1 ದಿನಾಂಕ:01-01-2019.
2. ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 04 ಎಕ್ಯೂಎ 2019, ದಿನಾಂಕ:26-12-2019.
3. ಸರ್ಕಾರದ ಅಧಿಸೂಚನೆ ಸಂಖ್ಯೆ. ಆರ್‌ಡಿ 04 ಎಕ್ಯೂಎ 2019, ದಿನಾಂಕ:03-06-2020.
4. ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್.ಎಕ್ಯೂ.ಇತರೆ.ಸಿ.ಆರ್/105/2017/12646/ಬಿ1,ದಿ:31-08-2020.

13 OCT 2020
OFFICE OF THE
DEPUTY COMMISSIONER
D.K. MANGALURU

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಸಂಖ್ಯೆ:(1)ರ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:07-02-2019ರಂದು ಪ್ರಸ್ತಾಪಿತ ಯೋಜನೆಗೆ ಭೂಸ್ವಾಧೀನ ಕಾಯ್ದೆ ಕಲಂ-11(1)ರ ಪ್ರಾಥಮಿಕ ಅಧಿಸೂಚನೆಯು ಪ್ರಕಟವಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ: (2)ರಲ್ಲಿ ಭೂಸ್ವಾಧೀನ ಕಾಯ್ದೆ ಕಲಂ-15(2)(3)ರಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ಸರ್ಕಾರದಿಂದ ನಿರ್ದೇಶನ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ: (3)ರಲ್ಲಿ ಭೂಸ್ವಾಧೀನ ಕಾಯ್ದೆ ಕಲಂ-19(7)ರಡಿ ದಿನಾಂಕ:07-05-2020 ರಿಂದ ದಿನಾಂಕ:07-10-2020ರವರೆಗೆ ಕಾಲಾವಕಾಶವನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ: (4)ರಲ್ಲಿ ದಿನಾಂಕ:31-08-2020ರ ಪತ್ರದಲ್ಲಿ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರಿಂದ ಎ.ಡಿ.ಬಿ. ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಮೇಲ್ಮಟ್ಟ ಜಲಸಂಗ್ರಹ ನಿರ್ಮಾಣ ಕಾಮಗಾರಿಗಾಗಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಮರೋಳಿ ಗ್ರಾಮದ ಸ.ನಂ.19/1ಎ1ಪಿ1ಪಿ1ರಲ್ಲಿ 00-14-00 ಸೆಂಟ್ಸ್ ಜಮೀನನ್ನು ಭೂಸ್ವಾಧೀನಪಡಿಸಲು ಕಲಂ-19(1)ರ ಅಧಿಸೂಚನೆಗೆ ಅನುಮೋದನೆ ನೀಡುವಂತೆ ಕೋರಿಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ-19ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಭೂಕೋರಿಕಾ ಸಂಸ್ಥೆಯ ಹಾಗೂ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ರವರ ಕೋರಿಕೆಯ ಮೇರೆಗೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 04 ಎಕ್ಯೂಎ 2019,**
**ಬೆಂಗಳೂರು ದಿನಾಂಕ:30-09-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಮರೋಳಿ ಗ್ರಾಮದ ಸ.ನಂ.19/1ಎ1ಪಿ1ಪಿ1ರಲ್ಲಿ 00-14-.00 ಸೆಂಟ್ಸ್ ಜಮೀನನ್ನು, ಎ.ಡಿ.ಬಿ. ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಮೇಲ್ಮಟ್ಟ ಜಲಸಂಗ್ರಹ ನಿರ್ಮಾಣ ಕಾಮಗಾರಿಗಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಭೂಸ್ವಾಧೀನ ಕಾಯ್ದೆ-2013ರ ಕಲಂ-19(1) ಮತ್ತು 19(2)ರಡಿಯಲ್ಲಿನ ಅವಕಾಶದನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸಿದೆ.

ವಿಶೇಷ ಭೂಸ್ವಾಧೀನಾಧಿಕಾರಿ, ಮಂಗಳೂರು ಮಹಾನಗರ ಪಾಲಿಕೆ, ಮಂಗಳೂರು ಇವರನ್ನು ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ (ಜಿ) ಖಂಡದ ಮೇರೆಗೆ ಜಿಲ್ಲಾಧಿಕಾರಿಗಳ ಕಾರ್ಯವನ್ನು ನಿರ್ವಹಿಸಲು ನಿಯುಕ್ತಿಗೊಳಿಸಲಾಗಿದೆ. ಹಾಗೂ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡುವ ಸ್ವತ್ತುಗಳನ್ನು ಸ್ವಾಧಿನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ. ಕರಡು ಐತೀರ್ಪು ರಚಿಸುವ ಮುನ್ನ ಭೂಸ್ವಾಧೀನ ವೆಚ್ಚದ ಪೂರ್ಣ ಮೊತ್ತವನ್ನು ಸಂಬಂಧಿಸಿದ ಭೂಕೋರಿಕಾ ಇಲಾಖೆಯಿಂದ ಭರಣ ಮಾಡಿಕೊಳ್ಳತಕ್ಕದ್ದು, ಹಾಗೂ ಈ ಹಿಂದೆ ಇದೇ ಜಮೀನುಗಳು ಭೂಸ್ವಾಧೀನವಾಗಿಲ್ಲವೆಂದು ಭೂಸ್ವಾಧೀನಾಧಿಕಾರಿಗಳು ಖಚಿತಪಡಿಸಿಕೊಂಡು ದೃಢಿಕರಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
30/9/2020

**(ನಾಗವೇಣಿ ಎಸ್.ಕೆ.)**
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ ಹಾಗೂ ಪು&ಪು)

**ಇವರಿಗೆ:**

1. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
2. ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.
3. ವಿಶೇಷ ಭೂಸ್ವಾಧೀನಾಧಿಕಾರಿ, ಮಂಗಳೂರು ಮಹಾನಗರ ಪಾಲಿಕೆ, ಮಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಕಂದಾಯ ಇಲಾಖೆ, (ಭೂಸ್ವಾಧೀನ) ಇ-ಗೆಜೆಟ್‌ನಲ್ಲಿ ಅಪ್‌ಲೋಡ್ ಮಾಡಲು.
5. ಶಾಖಾ ರಕ್ಷಾ ಕಡತ.

**ಕರ್ನಾಟಕ ಸರ್ಕಾರ**

**ಕಂದಾಯ ಇಲಾಖೆ**

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ -2013ರ ಕಲಂ 19(1) ಹಾಗೂ 19(2)ರಡಿ ಘೋಷಣೆ.**

**ಸಂ: ಕಂಇ 04 ಎಕ್ಯೂಎ 2019** **ದಿನಾಂಕ:30-09-2020**

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಮಂಗಳೂರು ನಗರದ ಎಡಿಬಿ ನೆರವಿನ ಕ್ವಿಮಿಪ್ ಯೋಜನೆಯಡಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ಮೇಲ್ಮಟ್ಟ ಜಲ ಸಂಗ್ರಹಗಾರ ನಿರ್ಮಾಣ ಕಾಮಗಾರಿಗಾಗಿ ಮಂಗಳೂರು ತಾಲೂಕು ಮರೋಳಿ ಗ್ರಾಮದ ಸರ್ವೆ ನಂಬ್ರ 19/1ಎ1ಪಿ1-ಪಿ1 ರಲ್ಲಿ 0.14 ಎಕ್ರೆ ಜಮೀನುಗಳ ಭೂಸ್ವಾಧೀನತೆ ಅಗತ್ಯವಾಗಿದೆ ಎಂದು, ಈ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನುಗಳಿಗೆ ಕೇಂದ್ರ ಸರ್ಕಾರ ಹೊಸ ಕಾಯ್ದೆ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ-2013" ರ ಕಲಂ 6(2) ರ ಅಡಿಯಲ್ಲಿ ಸಾಮಾಜಿಕ ಪರಿಣಾಮ ಅಧ್ಯಯನವನ್ನು ನಡೆಸಲಾಗಿದೆ. ಸರ್ಕಾರದ ಆದೇಶದಂತೆ ಕಂ.ಇ 11 ಎಸ್ ಆರ್ ಆರ್ 2017 ದಿನಾಂಕ 13-06-2018 ಪ್ರಕಾರ ಸಾಮಾಜಿಕ ಪರಿಣಾಮ ಅಧ್ಯಯನ ವರದಿ (SIA) ಅನುಮೋದನೆಗೊಂಡಿರುತ್ತದೆ.

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ-2013" ರ ಕಲಂ-11ರಡಿ ಕ್ರಮಾಂಕ ಎಲ್.ಎ.ಕ್ಯೂ.ಇತರೆ.ಸಿ.ಆರ್ 101/2017/12642/ಬಿ1 ದಿನಾಂಕ 01-01-2019 ರನ್ವಯ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ಸದ್ರಿ ಅಧಿಸೂಚನೆಯನ್ನು ದಿನಾಂಕ: 07/02/2019 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ ಭೂಸ್ವಾಧೀನ ಕಾಯ್ದೆ 2013ರ ಕಲಂ 15(2) ರನ್ವಯ ಸದ್ರಿ ಪ್ರಕರಣದಲ್ಲಿ ಮುಂದುವರೆಯಲು ಸರ್ಕಾರದ ಪತ್ರ ಸಂಖ್ಯೆ ಕಂ.ಇ 04 ಎ ಕ್ಯೂ ಎ 2019 (ಇ) ದಿನಾಂಕ: 26-12-2019 ರಡಿ ನಿರ್ದೇಶನ ನೀಡಲಾಗಿದೆ.

ಈ ಪ್ರಕರಣದಲ್ಲಿ ದಿನಾಂಕ: 07-02-2020 ರೊಳಗೆ ಅಂತಿಮ ಅಧಿಸೂಚನೆ ಹೊರಡಿಸಬೇಕಾಗಿದ್ದು, ಸರಕಾರದ ಅಧಿಸೂಚನೆ ಸಂಖ್ಯೆ ಕಂಇ 04 ಎಕ್ಯೂಎ 2019, ದಿನಾಂಕ 27-02-2020 ಮತ್ತು ಕಂಇ 04 ಎಕ್ಯೂಎ 2019, ದಿನಾಂಕ 30-06-2020 ರನ್ವಯ ಕಾಲಾವಕಾಶವನ್ನು 07-10-2020 ರವರೆಗೆ ವಿಸ್ತರಿಸಲಾಗಿದೆ.

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ ಕಾಯ್ದೆ-2013"ರ ಕಲಂ 19(1) ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಜಮೀನುಗಳು ಅಗತ್ಯವಾಗಿವೆ ಎಂದು ಸದ್ರಿ ಅಧಿನಿಯಮ 19(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದ್ರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣ (ಜಿ) ಖಂಡದ ಮೇರೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು ಇವರನ್ನು ಸದ್ರಿ ಜಮೀನುಗಳಲ್ಲಿ ಭೂಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಪ್ರಕ್ರಿಯೆಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ ಹಾಗೂ ಸದ್ರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದ್ರಿ ಅಧಿನಿಯಮದ 20ನೇ ಪ್ರಕರಣ ಮೇರೆಗೆ ನಿರ್ದೇಶನ ನೀಡಲಾಗಿದೆ.

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ-2013" ರ ಕಲಂ 18 ರಡಿ ಆಯುಕ್ತರು, ರಾಜ್ಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ ಕಂ.ಇ 04 ಎಸ್ ಆರ್ ಆರ್ 2020 ದಿನಾಂಕ 04-08-2020 ರನ್ವಯ ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಕರಡು ಯಾದಿಯನ್ನು ಅನುಮೋದಿಸಲಾಗಿದೆ. ಈ ಪ್ರಸ್ತಾವನೆಯಲ್ಲಿ ಯಾವುದೇ ಕುಟುಂಬಗಳ ಜೀವನೋಪಾಯದ ಮುಖ್ಯ ಆಧಾರ (Primary Source of Livelihood ) ಕ್ಕೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ. ಆದ್ದರಿಂದ ಈ ಭೂಸ್ವಾಧೀನತೆಗೆ ಒಳಪಟ್ಟ ಕುಟುಂಬಗಳಿಗೆ ಯಾವುದೇ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಪರಿಹಾರ ನೀಡಲು ಅವಕಾಶವಿರುವುದಿಲ್ಲವೆಂದು ತೀರ್ಮಾನಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದ್ರಿ ಅಧಿನಿಯಮದ 21ನೇ ಪ್ರಕರಣದ ಉಪ-ಪ್ರಕರಣ (1) ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನು ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೈಮು ಸಲ್ಲಿಸಲು ತಿಳುವಳಿಕೆಯ ನೋಟಿಸು ನೀಡಿ ಮುಂದಿನ ಕ್ರಮ ಜರುಗಿಸಲು ವಿಶೇಷ ಭೂಸ್ವಾಧೀನಾಧಿಕಾರಿ, ಮಹಾನಗರ ಪಾಲಿಕೆ, ಮಂಗಳೂರು ಇವರಿಗೆ ನಿರ್ದೇಶಿಸಿದೆ.

ಭೂಸ್ವಾಧೀನತೆಗೆ ಒಳಪಟ್ಟ ಜಮೀನಿನ ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಮಂಗಳೂರು ಮಹಾನಗರಪಾಲಿಕೆ, ಮಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗೆ ಇಡಲಾಗಿದೆ.

ಜಿಲ್ಲೆ: ದಕ್ಷಿಣ ಕನ್ನಡ ಜಿಲ್ಲೆ ತಾಲೂಕು: ಮಂಗಳೂರು ಹೋಬಳಿ: ಮಂಗಳೂರು ಬಿ ಗ್ರಾಮ: ಮರೋಳಿ

| ಕ್ರ. ಸಂಖ್ಯೆ | ಖಾತೆದಾರರ ಹೆಸರು | ಸ.ನಂಬ್ರ | ಜೆ.ಎಂ.ಸಿ ಯಂತೆ | ಜಮೀನಿನ ತರಹೆ | ಚಕ್ಕುಬಂದಿ | | | | ಭೂಸ್ವಾಧೀನ ವಿವರ | | ಕಟ್ಟಡ/ ಬಾವಿ / ಇತರೆ | ಗಿಡ/ಮರ |
|---|---|---|---|---|---|---|---|---|---|---|---|---|
| | | | | | ಉತ್ತರ (ಸ.ನಂ) | ದಕ್ಷಿಣ (ಸ.ನಂ) | ಪೂರ್ವ (ಸ.ನಂ) | ಪಶ್ಚಿಮ (ಸ.ನಂ) | ವಿಸ್ತೀರ್ಣ | ಮೌಲ್ಯ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಗಿರಿಜಾ ದಾಸ್ (ಮೂ.ದಾ) ಕೆ.ಮಾದವ್ (ಮೂ.ಗೇ) | 19/1ಎ1ಪಿ1ಪಿ1 | 19/1ಎ1ಪಿ2 | ಪುಂಜ | ಇದೇ ಸ.ಡಿ ಅಂಶ | ಇದೇ ಸ.ಡಿ ಅಂಶ ಮತ್ತು ಸ.ಡಿ ಲೈನು | ಇದೇ ಸ.ಡಿ ಅಂಶ | ಸರ್ವೆ ಲೈನು | 0.14 | 0.25 | - | ಹಲಸು-2 ಮಾವು-1 ಕಾಟು ಮರಗಳು (ಕಟ್ಟಿಗೆ ಜಾತಿ) |
| | **ಒಟ್ಟು** | | | | | | | | **0.14 ಎಕ್ರೆ** | | | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ನಾಗವೇಣಿ ಎಸ್.ಕೆ.)**
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ ಹಾಗೂ ಪು&ಪು)